ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು
ಕುಂದುಕೊರತೆ ಮತ್ತು ಮಾನವ ಹಕ್ಕುಗಳು,
ಸಂ:ಜಿಸಿ(1)/535/ಬೆಂ.ನಗರ/2010/ಭಾಗ-7 ಬೆಂಗಳೂರು, ದಿನಾಂಕ:17.06.2010.

ಗೆ :
ಮಾನ್ಯ ಸಂಪಾದಕರು,
ವಿಜಯ ಕರ್ನಾಟಕ
ಬೆಂಗಳೂರು.

ಮಾನ್ಯರೇ,

ದಿನಾಂಕ 15.06.2010 ರಂದು ಮತ್ತು ತದನಂತರ 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ಪೊಲೀಸ್ ಇಲಾಖೆಯಿಂದ ಮೂಗರ್ಜಿ ವಿಚಾರಣೆಯ ಬಗ್ಗೆ ಕೆಲವು ವಿಷಯಗಳು ಪ್ರಕಟವಾಗಿದ್ದು, ಈ ವಿಷಯದ ಬಗ್ಗೆ ಈ ಕೆಳಗಿನ ಸ್ಪಷ್ಟೀಕರಣ ನೀಡಲಾಗಿದೆ :

ಪೊಲೀಸ್ ಪ್ರಧಾನ ಕಛೇರಿಯಲ್ಲಿ ಟಪಾಲಿನ ಮೂಲಕ ಸ್ವೀಕರಿಸಲಾಗುವ ಕಾಗದ ಪತ್ರಗಳನ್ನು ಸ್ವೀಕರಿಸಿದ ನಂತರ ಒಳಬಂದ ಶಾಖೆಯು ಸಂಬಂಧಪಟ್ಟ ಶಾಖೆಗಳಿಗೆ ಸದರಿ ಕಾಗದ ಪತ್ರಗಳನ್ನು ರವಾನಿಸುತ್ತದೆ.

ಸಂಬಂಧಪಟ್ಟ ಶಾಖೆಯಲ್ಲಿ ಪತ್ರಗಳಲ್ಲಿ ನಮೂದಿಸಿರುವ ವಿಷಯದ ಗಂಭೀರತೆಯ ಪ್ರಕಾರ ಸದರಿ ಪತ್ರಗಳನ್ನು ಶಾಖೆಯ ಹಿರಿಯ ಅಧಿಕಾರಿಗಳ ಮುಂದೆ ಮಂಡಿಸಲಾಗುತ್ತದೆ. ಕೆಲವು ಸಾಮಾನ್ಯ ಅರ್ಜಿಗಳನ್ನು ಲಿಪಿಕ ಸಿಬ್ಬಂದಿಯ ಮಟ್ಟದಲ್ಲಿಯೇ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಘಟಕಾಧಿಕಾರಿಗಳಿಗೆ ಕಳುಹಿಸಲಾಗುತ್ತದೆ.

ಈ ರೀತಿ ದಿನಾಂಕ 06.05.2010 ರಂದು ಮಾನ್ಯ ಸಂಪಾದಕರು, ವಿಜಯ ಕರ್ನಾಟಕ ದಿನ ಪತ್ರಿಕೆ ರವರಿಗೆ ಬರೆಯಲಾದ ಪತ್ರದ ಪ್ರತಿಯೊಂದನ್ನು ಒಳಬಂದ ಶಾಖೆಯವರು ಸ್ವೀಕರಿಸಿ ಅದನ್ನು ದೂರು ಶಾಖೆಗೆ ಕಳುಹಿಸಿರುತ್ತಾರೆ. ದೂರು ಶಾಖೆಯಲ್ಲಿ ಸದರಿ ಪತ್ರದಲ್ಲಿ ವಿಶೇಷವಾದ ಯಾವುದೇ ವಿಷಯ ಇಲ್ಲವಾದರೂ ವಿಚಾರಣೆ ಮತ್ತು ವರದಿಗಾಗಿ ಉಪ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ದೂರು ಶಾಖೆಯ ಲಿಪಿಕ ಸಿಬ್ಬಂದಿಯವರೇ ಕಳುಹಿಸಿರುತ್ತಾರೆ. ಈ ರೀತಿ ಸದರಿ ಪತ್ರಕ್ಕೆ ಸಂಬಂದಿಸಿದಂತೆ ಪೊಲೀಸ್ ಪ್ರಧಾನ ಕಛೇರಿಯ ಯಾವುದೇ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕಾಗಲೀ ಡಿ.ಜಿ. ಮತ್ತು ಐ.ಜಿ.ಪಿ. ರವರ ಗಮನಕ್ಕಾಗಲೀ ಸದರಿ ವಿಷಯವು ಬಂದಿರುವುದಿಲ್ಲ.

.2

ಆದಾಗ್ಯೂ, ಪೊಲೀಸ್ ಪ್ರಧಾನ ಕಛೇರಿಯಿಂದ ಸ್ವೀಕರಿಸಲ್ಪಟ್ಟ ಅರ್ಜಿಯನ್ನು ಸೂಕ್ತ ಜವಾಬ್ದಾರಿಯುತ ಅಧಿಕಾರಗಳಿಂದ ವಿಚಾರಿಸಲ್ಪಡುವುದು ನಡೆಯಬೇಕಾದ ಕ್ರಮವಾಗಿದೆ, ಆದರೆ ಈ ಅರ್ಜಿಯ ವಿಷಯದಲ್ಲಿ ಕೇವಲ ಪೊಲೀಸ್ ಕಾನ್ಸ್‌ಟೇಬಲ್ ವಿಚಾರಣೆ ನಡೆಸಿರುವುದು ಸರಿಯಾದ ಕ್ರಮ ಆಗಿರುವುದಿಲ್ಲ. ಈ ವಿಚಾರದಲ್ಲಿ ಬೆಂಗಳೂರು ನಗರದ ಪೊಲೀಸ್ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಂದ ವಿವರಣೆಯನ್ನು ಕೇಳಿದ್ದು ಸೂಕ್ತ ಕ್ರಮ ಜರುಗಿಸುವವರಿದ್ದಾರೆ. ಪೊಲೀಸ್ ಪ್ರಧಾನ ಕಛೇರಿಯಲ್ಲಿ ಇಂತಹ ಅರ್ಜಿಗಳ ವಿಚಾರಣೆಯಲ್ಲಿ ಸೂಕ್ತ ವಿವೇಚನೆಯನ್ನು ಉಪಯೋಗಿಸದೆ ಇರುವುದರ ಬಗ್ಗೆ ಸಂಬಂಧಪಟ್ಟ ಲಿಪಿಕ ಸಿಬ್ಬಂದಿ ಮೇಲೆ ಕ್ರಮ ಜರುಗಿಸಲಾಗುತ್ತಿದೆ.

ಒಟ್ಟಾರೆ, ಈ ಅರ್ಜಿ ವಿಚಾರಣೆಗೆ ಸಂಬಂಧಪಟ್ಟಂತೆ ಡಿ.ಜಿ. ಮತ್ತು ಐ.ಜಿ.ಪಿ. ಶ್ರೀ ಅಜಯ್ ಕುಮಾರ್ ಸಿಂಗ್ ರವರ ಗಮನಕ್ಕೆ ಯಾವ ಹಂತದಲ್ಲಿಯೂ ಬಂದಿರುವುದಿಲ್ಲ. ಅಲ್ಲದೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯಾವುದೇ ವಿಚಾರ ಪೊಲೀಸ್ ಇಲಾಖೆಗೆ ಇರುವುದಿಲ್ಲ.

ತಮ್ಮ ವಿಶ್ವಾಸಿ,

**(ಓಂ ಪ್ರಕಾಶ್)**
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು
ಕುಂದುಕೊರತೆ ಮತ್ತು ಮಾನವ ಹಕ್ಕುಗಳು,
ಬೆಂಗಳೂರು.

17.06.2010

# ಪತ್ರಿಕಾ ಪ್ರಕಟಣೆ

ದಿನಾಂಕ 15.06.2010 ರಂದು ಮತ್ತು ತದನಂತರ ಪ್ರಮುಖ ದಿನ ಪತ್ರಿಕೆಯಲ್ಲಿ ಪೊಲೀಸ್ ಇಲಾಖೆಯಿಂದ ಮೂಗರ್ಜಿ ವಿಚಾರಣೆಯ ಬಗ್ಗೆ ಕೆಲವು ವಿಷಯಗಳು ಪ್ರಕಟವಾಗಿದ್ದು, ಈ ವಿಷಯದ ಬಗ್ಗೆ ಈ ಕೆಳಗಿನ ಸ್ಪಷ್ಟೀಕರಣ ನೀಡಲಾಗಿದೆ :

ಪೊಲೀಸ್ ಪ್ರಧಾನ ಕಛೇರಿಯಲ್ಲಿ ಟಪಾಲಿನ ಮೂಲಕ ಸ್ವೀಕರಿಸಲಾಗುವ ಕಾಗದ ಪತ್ರಗಳನ್ನು ಸ್ವೀಕರಿಸಿದ ನಂತರ ಒಳಬಂದ ಶಾಖೆಯು ಸಂಬಂಧಪಟ್ಟ ಶಾಖೆಗಳಿಗೆ ಸದರಿ ಕಾಗದ ಪತ್ರಗಳನ್ನು ರವಾನಿಸುತ್ತದೆ.

ಸಂಬಂಧಪಟ್ಟ ಶಾಖೆಯಲ್ಲಿ ಪತ್ರಗಳಲ್ಲಿ ನಮೂದಿಸಿರುವ ವಿಷಯದ ಗಂಭೀರತೆಯ ಪ್ರಕಾರ ಸದರಿ ಪತ್ರಗಳನ್ನು ಶಾಖೆಯ ಹಿರಿಯ ಅಧಿಕಾರಿಗಳ ಮುಂದೆ ಮಂಡಿಸಲಾಗುತ್ತದೆ. ಕೆಲವು ಸಾಮಾನ್ಯ ಅರ್ಜಿಗಳನ್ನು ಲಿಪಿಕ ಸಿಬ್ಬಂದಿಯ ಮಟ್ಟದಲ್ಲಿಯೇ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಘಟಕಾಧಿಕಾರಿಗಳಿಗೆ ಕಳುಹಿಸಲಾಗುತ್ತದೆ.

ಈ ರೀತಿ ದಿನಾಂಕ 06.05.2010 ರಂದು ಮಾನ್ಯ ಸಂಪಾದಕರು, ವಿಜಯ ಕರ್ನಾಟಕ ದಿನ ಪತ್ರಿಕೆ ರವರಿಗೆ ಬರೆಯಲಾದ ಪತ್ರದ ಪ್ರತಿಯೊಂದನ್ನು ಒಳಬಂದ ಶಾಖೆಯವರು ಸ್ವೀಕರಿಸಿ ಅದನ್ನು ದೂರು ಶಾಖೆಗೆ ಕಳುಹಿಸಿರುತ್ತಾರೆ. ದೂರು ಶಾಖೆಯಲ್ಲಿ ಸದರಿ ಪತ್ರದಲ್ಲಿ ವಿಶೇಷವಾದ ಯಾವುದೇ ವಿಷಯ ಇಲ್ಲವಾದರೂ ವಿಚಾರಣೆ ಮತ್ತು ವರದಿಗಾಗಿ ಉಪ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ದೂರು ಶಾಖೆಯ ಲಿಪಿಕ ಸಿಬ್ಬಂದಿಯವರೇ ಕಳುಹಿಸಿರುತ್ತಾರೆ. ಈ ರೀತಿ ಸದರಿ ಪತ್ರಕ್ಕೆ ಸಂಬಂದಿಸಿದಂತೆ ಪೊಲೀಸ್ ಪ್ರಧಾನ ಕಛೇರಿಯ ಯಾವುದೇ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕಾಗಲೀ ಡಿ.ಜಿ. ಮತ್ತು ಐ.ಜಿ.ಪಿ. ರವರ ಗಮನಕ್ಕಾಗಲೀ ಸದರಿ ವಿಷಯವು ಬಂದಿರುವುದಿಲ್ಲ.

ಆದಾಗ್ಯೂ, ಪೊಲೀಸ್ ಪ್ರಧಾನ ಕಛೇರಿಯಿಂದ ಸ್ವೀಕರಿಸಲ್ಪಟ್ಟ ಅರ್ಜಿಯನ್ನು ಸೂಕ್ತ ಜವಾಬ್ದಾರಿಯುತ ಅಧಿಕಾರಗಳಿಂದ ವಿಚಾರಿಸಲ್ಪಡುವುದು ನಡೆಯಬೇಕಾದ ಕ್ರಮವಾಗಿದೆ, ಆದರೆ ಈ ಅರ್ಜಿಯ ವಿಷಯದಲ್ಲಿ ಕೇವಲ ಪೊಲೀಸ್ ಕಾನ್ಸ್‌ಟೇಬಲ್ ವಿಚಾರಣೆ ನಡೆಸಿರುವುದು ಸರಿಯಾದ ಕ್ರಮ ಆಗಿರುವುದಿಲ್ಲ. ಈ ವಿಚಾರದಲ್ಲಿ ಬೆಂಗಳೂರು ನಗರದ ಪೊಲೀಸ್ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಂದ ವಿವರಣೆಯನ್ನು ಕೇಳಿದ್ದು ಸೂಕ್ತ ಕ್ರಮ ಜರುಗಿಸುವವರಿದ್ದಾರೆ. ಪೊಲೀಸ್ ಪ್ರಧಾನ ಕಛೇರಿಯಲ್ಲಿ ಇಂತಹ ಅರ್ಜಿಗಳ ವಿಚಾರಣೆಯಲ್ಲಿ ಸೂಕ್ತ ವಿವೇಚನೆಯನ್ನು ಉಪಯೋಗಿಸದೆ ಇರುವುದರ ಬಗ್ಗೆ ಸಂಬಂಧಪಟ್ಟ ಲಿಪಿಕ ಸಿಬ್ಬಂದಿ ಮೇಲೆ ಕ್ರಮ ಜರುಗಿಸಲಾಗುತ್ತಿದೆ.

ಒಟ್ಟಾರೆ, ಈ ಅರ್ಜಿ ವಿಚಾರಣೆಗೆ ಸಂಬಂಧಪಟ್ಟಂತೆ ಡಿ.ಜಿ. ಮತ್ತು ಐ.ಜಿ.ಪಿ. ಶ್ರೀ ಅಜಯ್ ಕುಮಾರ್ ಸಿಂಗ್ ರವರ ಗಮನಕ್ಕೆ ಯಾವ ಹಂತದಲ್ಲಿಯೂ ಬಂದಿರುವುದಿಲ್ಲ. ಅಲ್ಲದೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯಾವುದೇ ವಿಚಾರ ಪೊಲೀಸ್ ಇಲಾಖೆಗೆ ಇರುವುದಿಲ್ಲ.